# ಮಾರು ಹೋದಿ?

■ ಡಾ. ಕವಿತ ಬಿ.ಟಿ.
ಕಲೆ: ಸಂತೋಷ್ ಸಸಿಹಿತ್ಲು



ಟೇಬಲ್ ಮೇಲಿಟ್ಟ ತಲೆಯನ್ನು ಎತ್ತುವುದೇ ಸಾಹಸ ಎನಿಸಿದಂತಾಯಿತು. ಕಣ್ಣು ಬಿಟ್ಟು ನೋಡಿದಾಗ ಆಗಲೇ ಕತ್ತಲಾವರಿಸಿದೆ. ಎಷ್ಟು ಹೊತ್ತು ಹಾಗೇ ಕುಳಿತಿದ್ದೆನೋ? ಮುಚ್ಚಿದ ಕಣ್ಣುಗಳ ಒಳಗಿನಿಂದ ಕತ್ತಲಾಗುತ್ತಿರುವ ಬದುಕಿನ ಬಗೆಗಿನ ಚಿತ್ರಗಳು, ಸಂಜೆಯ ಮಸುಕಿನಲ್ಲಿ ತೇಲಿ ತೇಲಿ ಹೋಗುತ್ತಿರುವ ಅಸ್ಪಷ್ಟ ಚಿತ್ರಣಗಳು. ಎದೆನೋವಿನಿಂದ ಭಾರವಾಗಿದೆಯಾ? ವಿಷಾದದಿಂದ ಕುಸಿದಿದೆಯಾ? ಹೊಟ್ಟೆ ತಳಮಳಿಸುತ್ತಿರುವುದು ಮಾತ್ರ ಸತ್ಯ.

ಖಾಕಿ ದಿರಿಸಿನ ಕೆಲಸದಲ್ಲಿ ದಿನನಿತ್ಯ ನೂರಾರು ಸಮಸ್ಯೆ ಸವಾಲುಗಳ ನಡುವೆ ಕಳೆವ ದಿನಗಳಲ್ಲಿ ವಾರಕ್ಕೆರಡಾದರೂ ಪೋಕ್ಸೋ ಕೇಸುಗಳಲ್ಲಿ ನೊಂದ ಬಾಲಕಿಯರ ಹೇಳಿಕೆ ಮಾಡುವ ಕೆಲಸ ಎದುರಾಗುತ್ತದೆ. ಆ ದಿನ ಕೂಡ ವಾಣಿ ಹೇಳಿಕೆ ಮಾಡಿದಾಗ ಹದಿಹರೆಯದ ಆಕರ್ಷಣೆಯ ಮತ್ತೊಂದು ಪ್ರಕರಣದಂತೆ ಭಾವಿಸಿದ್ದೆ.

ಬೆಂಗಳೂರಿನಲ್ಲಿ ತಾಯಿ ತಮ್ಮನೊಂದಿಗೆ ವಾಸವಿದ್ದ ವಾಣಿ ಎಸ್ಸೆಸ್ಸೆಲ್ಸಿವರೆಗೆ ಒಳ್ಳೆಯ ಶಾಲೆಯಲ್ಲೇ ವಿದ್ಯಾಭ್ಯಾಸ ಮಾಡಿದವಳು. ಮನೆಯ ಪರಿಸರ ಮಕ್ಕಳ ಬೆಳವಣಿಗೆಗೆ ಪೂರಕ ಅಥವಾ ಮಾರಕ ಆಗಬಹುದಾದಂತೆ ವಾಣಿಯ ಬಾಲ್ಯದ ಮೇಲೂ ಪ್ರಭಾವ ಬೀರಿತ್ತು. ಕಡು ಬಡತನದ ಮನೆ, ಕುಡಿತದ ಚಟದ ತಂದೆ, ಪ್ರತಿನಿತ್ಯ ನಡೆವ ರಂಪಾಟಗಳು, ಬದುಕಿಗಾಗಿ ಅನಿವಾರ್ಯವಾಗಿ ಗಂಡನಿಂದ ದೂರಾದ ತಾಯಿ. ಬಯಸುವುದು ಬಾನಿನಷ್ಟಾದರೂ ದೊರಕುವುದು ಚಿಟಿಕೆಯಷ್ಟು. ಏನೂ ಇರದ ಬದುಕಿನಲ್ಲಿ ಪ್ರೀತಿಯ ಅರಸಿ ಹೊರಟ ಮನಸ್ಸುಗಳು. ಜಗತ್ತಿನಲ್ಲಿ ಕೊರತೆಯಿರುವ, ಅತ್ಯಂತ ಕೊರತೆಯಿರುವ ಒಂದೇ ವಸ್ತುವೆಂದರೆ ಅದು ಪ್ರೀತಿ.

ವಾಣಿ ಓದಿನಲ್ಲಿ ಆಸಕ್ತಿ ಕಳೆದುಕೊಂಡು ಎಸ್ಸೆಸ್ಸೆಲ್ಸಿ ಫೇಲಾದಳು. ತನ್ನ ಕಡುಕಷ್ಟದ ಬದುಕಿನಲ್ಲೂ ಮಕ್ಕಳ ಓದಿಗೆ ತೊಂದರೆಯಾಗದಂತೆ ನಿಗಾವಹಿಸಿ ಒಳ್ಳೆಯ ಶಾಲೆಗೆ ಸೇರಿಸಿದ್ದ ವಾಣಿಯ ತಾಯಿಯ ನಿರೀಕ್ಷೆ ಚೂರಾಗಿ ಹೋಗಿತ್ತು. ಬಯಸುವುದಾದರೂ ಏನು? ಬಹುಶಃ ನಾವು ಈಗ ಬದುಕುತ್ತಿರುವ ಬಾಳಿಗಿಂತ